‘ಹತ್ತು ನಿಮಿಷ, ಟೇಬಲ್ ರೆಡಿ ಮಾಡ್ಬಿಡ್ತೀನಿ–ಅಲ್ಲೀತನಕ ರೇಡಿಯೊ ಕೇಳ್ತಿರು’ ಎಂದು ಅಂಗೈಯಗಲದ ರೇಡಿಯೊ ಆನ್ ಮಾಡಿದಳು.

‘ಲಗ್ ಜಾ ಗಲೇ ಕೆ ಫಿರ್ ಯೆ...’ ಹಾಡು ಬರುತಿತ್ತು.

ನನ್ನ ಎಣಿಕೆಗೆ ಮೀರಿ ಏನೆಲ್ಲಾ ನಡೆಯುತ್ತಿದೆ. ಸಮಾನ ದುಃಖಿಗಳು, ಒಬ್ಬರನ್ನೊಬ್ಬರು ಸೆಳೆವ ತುಡಿತ, ಹಾತೊರೆವ ಮನಸ್ಸು. ವಿಶ್ಲೇಷಣೆ ಬೇಕೇ? ಈ ಕ್ಷಣ ನಮ್ಮದು, ಅಷ್ಟೇ. ಮುಂದಿನದ್ದರ ಬಗ್ಗೆ ಖಾತರಿ ಇಲ್ಲ. ನೈಸರ್ಗಿಕ ವಿಪತ್ತು, ಅಪಘಾತಗಳಿಂದ ಅಮಾಯಕರ ಸಾವು ನೋವು, ತಳಮಳಗೊಳಿಸುವ ಶಾಕಿಂಗ್ ಸುದ್ದಿಗಳು. ಅರಿಸಿನ ಹಸಿಯಾಗಿರುವಾಗಲೇ ನವಜೋಡಿ ದುರ್ಮರಣ, ಹೆಣ ನೋಡಲು ಹೋಗಿ ಹೆಣವಾದ ಮಂದಿ, ಭೂಕುಸಿತದಲ್ಲಿ ಅಸಂಖ್ಯಾತ ಜನರ ಕಣ್ಮರೆ, ಪ್ರವಾಹದಲ್ಲಿ ಕೊಚ್ಚಿಹೋದ ಕುಟುಂಬ... ಒಂದೇ ಎರಡೇ... ಅನಿಶ್ಚಿತ ಬದುಕಿನಲ್ಲಿ ಯಾವುದೂ ಹೇಳಿ ಬರದು. ಹಾಗೆಯೇ ಅವಕಾಶವೂ. ನಮ್ಮ ಬಯಕೆಗಳು ಸುಳ್ಳಲ್ಲ – ತಪ್ಪು ಒಪ್ಪು ತೀರಾ ವೈಯಕ್ತಿಕ. ನನ್ನ ಸುಖ ದುಃಖಗಳಿಗೆ ನಾನೇ ಹೊಣೆ ಅನ್ನುವುದಾದರೆ ಬೇನೆಯಲ್ಲಿ ಬೇಯಬೇಕೇಕೆ? ಆಹ್ವಾನ, ಬರುವುದಾದರೆ ತಿರಸ್ಕರಿಸುವ ಬೂಟಾಟಿಕೆ ಯಾಕೆ ಬೇಕು? ನನ್ನೊಳಗಿನ ನಾನು ಅತೃಪ್ತನಾಗಿ ಏನನ್ನು ಸಾಧಿಸಬೇಕು, ಯಾರನ್ನು ಮೆಚ್ಚಿಸಬೇಕು? ಹಾಗೆಯೇ ಪಾಪದ ಸೃಜಿ... ನಮ್ಮ ಕರ್ಮವೆಂದು ತೆರೆಮರೆಯಲ್ಲಿ ಶೋಕಿಸಬೇಕೆ? ಇಡೀ ಜೀವನ, ಹೆದರಿಸುವ ಹೆದರಿಕೆಗೇಕೆ ಹೆದರಬೇಕು. ಹಾಡಿಗೆ ಸಮಾನಾಂತರವಾಗಿ ನನ್ನ ಮನಸ್ಸೂ ತರ್ಕಿಸುತ್ತಿತ್ತು.

★★★

ಸೃಜಿಯ ಉಪಚಾರದಲ್ಲಿ ಒಂದು ತುತ್ತು ಜಾಸ್ತಿ ಇಳಿದಿತ್ತು.

‘ಹೊರಡಲಾ?’ ಬಲವಂತದಿಂದ ಮೇಲೆದ್ದೆ.

‘ಬೇಡ ಅಂದ್ರೆ ಇದ್ಬಿಡ್ತೀಯ.’

ಒಂದು ಕ್ಷಣ ತಬ್ಬಿಬ್ಬಾದರೂ ‘ಸೀ ಯೂ’ ಎನ್ನುತ್ತ ಶಿಷ್ಟಾಚಾರದ ಅಪ್ಪುಗೆಗೆ ಕೈ ಚಾಚಿದೆ.

ನನ್ನ ಎಣಿಕೆಗೆ ವಿರುದ್ಧವಾಗಿ ಹಸ್ತ ಲಾಘವ! ‘ಥ್ಯಾಂಕ್ಯೂ ವೆರಿ ಮಚ್, ನಾಳೆ ಸಂಜೆ ಮತ್ತೆ ಭೇಟಿ, ಉದಯನ ಆತಿಥ್ಯ’ ನಗುತ್ತಲೇ ಬೀಳ್ಕೊಟ್ಟಳು.

ಆ ಕ್ಷಣ ನಾಚಿಕೆಯೆನ್ನಿಸಿತು.

ಲಾಸ್ಟ್ ಬೆಂಚ್ ಹುಡುಗಿ ಒಮ್ಮಿಂದೊಮ್ಮೆ ಫಸ್ಟ್ ಬಂದಂತೆಯೂ ನಾನು ಫೇಲ್ ಆದಂತೆಯೂ– ಸೋತ ಭಾವ ಆವರಿಸಿತು.

ನಗೆಯ ಮುಖವಾಡದೊಂದಿಗೆ ಹೊರಬಿದ್ದೆ.

ಆಗಸದಲ್ಲಿ ಆಗಷ್ಟೇ ಮೂಡುತ್ತಿದ್ದ ಮಳೆಬಿಲ್ಲು ಸುಂದರವಾಗಿತ್ತು. ‘ಸೂರ್ಯನ ಕಿರಣಗಳು ಮಳೆಹನಿಯ ಮೂಲಕ ಹಾದುಹೋಗುವಾಗ, ವಕ್ರೀಭವಿಸಿ ಮಳೆಬಿಲ್ಲು ಮೂಡುತ್ತದೆ’ ಶಾಲೆಯಲ್ಲಿ ಓದಿದ್ದು. ಮಳೆಬಿಲ್ಲಿನ ಜಾಗದಲ್ಲಿ ಸೃಜಿ ನಕ್ಕಂತಾಯ್ತು.

**ಕೆ.ವಿ. ರಾಜಲಕ್ಷ್ಮಿ**

ದೂರ ಸಂಪರ್ಕ ಇಲಾಖೆಯಲ್ಲಿ ಲೆಕ್ಕಾಧಿಕಾರಿಯಾಗಿ ನಿವೃತ್ತರು. ಪ್ರಸ್ತುತ ವಕೀಲ ವೃತ್ತಿಯಲ್ಲಿ ತೊಡಗಿಸಿಕೊಂಡಿದ್ದು, ಬೆಂಗಳೂರಿನಲ್ಲಿ ನೆಲೆಸಿದ್ದಾರೆ. 200ಕ್ಕೂ ಹೆಚ್ಚು ಕತೆ, ಹಾಸ್ಯ ಲೇಖನಗಳು ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ‘ಅಂಕುರ’ ಕಥಾಸಂಕಲನ, ‘ವಿನೋದ’ ಹಾಸ್ಯ ಬರಹಗಳ ಸಂಕಲನ ಅವರ ಪ್ರಕಟಿತ ಕೃತಿಗಳು.